ಓ.ಎಸ್. ನಂ. **86/2018** ಪಿ.ಡಬ್ಲ್ಯೂ- **1**

<u>ಸಾಕ್ಷಿಯನ್ನು ದಿನಾಂಕ **9.9.2022** ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>

<u>ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ</u>

ನಾನು ಮೂಲತಃ ಮಂಡ್ಯ ದವನು. 40 ವರ್ಷದಿಂದ ಮೈಸೂರಿನಲ್ಲಿ ವಾಸ ಮಾಡುತ್ತಿದ್ದೇನೆ. ಕ್ರಯದ ಪೂರ್ವದಲ್ಲಿ ನನಗೆ 5 ನೇ ಪ್ರತಿವಾದಿ ಪರಿಚಯವಿರುವುದಿಲ್ಲ. ನಾನು ಕೋಟೆಯಲ್ಲಿ ಯಾವುದೇ ಜಮೀನನ್ನು ಖರೀದಿ ಮಾಡಿರುವುದಿಲ್ಲ. ನಾನು ಮತ್ತು 5 ನೇ ಪ್ರತಿವಾದಿ ಆಪ್ತ ಸ್ನೇಹಿತರು ಎಂದರೆ ಸರಿಯಲ್ಲ. ನಾನು 2004 ರಲ್ಲಿ ದಾವಸ್ವತ್ತನ್ನು ಕ್ರಯಕ್ಕೆ ಪಡೆದುಕೊಂಡಿರುತ್ತೇನೆ. 5 ನೇ ಪ್ರತಿವಾದಿ 2003 ರಲ್ಲಿ ದಾವಾಸ್ವತ್ತನ್ನು ಖರೀದಿ ಮಾಡಿರುತ್ತಾರೆ. ನಾನು ಮೂಲ ಕ್ರಯಪತ್ರ, ಇ.ಸಿ ಯನ್ನು ಕ್ರಯಪತ್ರ ಪಡೆದುಕೊಳ್ಳುವ ಮೊದಲು ನೋಡಿರುತ್ತೇನೆ. ನಾನು ಮೂಲ ಕ್ರಯಪತ್ರವನ್ನು ಅಂದರೆ 4 ನೇ ಪ್ರತಿವಾದಿ ಹೆಸರಿನಲ್ಲಿದ್ದ ಕ್ರಯಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನಾನು ಕ್ರಯದ ಸಮಯದಲ್ಲಿ 5 ನೇ ಪ್ರತಿವಾದಿ ಹೆಸರಿಗೆ ಖಾತೆ ವರ್ಗಾವಣೆಯಾಗಿರುವ ಬಗ್ಗೆ ಪರಿಶೀಲನೆ ಮಾಡಿರುವುದಿಲ್ಲ. 5 ನೇ ಪ್ರತಿವಾದಿ ಕಂದಾಯ ಪಾವತಿ ಮಾಡಿರುವ ಬಗ್ಗೆ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. 5 ನೇ ಪ್ರತಿವಾದಿ ಹೆಸರಿಗೆ ಎಂದಿಗೂ ಖಾತೆ ವರ್ಗಾವಣೆಯಾಗಿರುವುದಿಲ್ಲ ಎಂದರೆ ಗೊತ್ತಿಲ್ಲ. ನಾನು ಖಾತೆ ವರ್ಗಾವಣೆಯಾಗಿರುವ ಬಗ್ಗೆ ಕ್ರಯಪತ್ರದ ಸಮಯದಲ್ಲಿ ನೋಡಿರುವುದಿಲ್ಲ. ನಾನು ಮತ್ತು 5 ನೇ ಪ್ರತಿವಾದಿ ಸೇರಿ ಪ್ರತಿವಾದಿ 1 ರಿಂದ 3 ರವರಿಗೆ ಮೋಸ ಮಾಡುವ ದುರುದ್ದೇಶದಿಂದ ಸುಳ್ಳು ಕ್ರಯಪತ್ರ ಪಡೆದುಕೊಂಡಿರುತ್ತೇವೆ ಎಂದರೆ ಸರಿಯಲ್ಲ. ದಾವಾಸ್ವತ್ತಿನ ಸ್ವಾಧೀನವನ್ನು ಕ್ರಯಪತ್ರದ ಮೂಲಕ ನನಗೆ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ದಾವಾಸ್ವತ್ತನ್ನು ನಾನು ಖರೀದಿ ಮಾಡಿದಾಗ ಖಾಲಿ ಇತ್ತು. ನಾನು ಮನೆ ಒಳಗೆ ಹೋಗಿರುವುದಿಲ್ಲ, ಅದನ್ನು ದುರುಪಯೋಗಪಡಿಸಿಕೊಂಡು ಪ್ರತಿವಾದಿ 1 ರಿಂದ 3 ರವರು ಮನೆ ಒಳಗೆ ಹೋಗಿರುತ್ತಾರೆ. ಪ್ರತಿವಾದಿ 1 ರಿಂದ 3 ರವರು ಯಾವ ದಿನ ದಾವಸ್ವತ್ತಿಗೆ ಅತಿಕ್ರಮ ಪ್ರವೇಶ ಮಾಡಿರುತ್ತಾರೆ ಎಂದು ನಿಖರವಾಗಿ ಹೇಳಲಾಗುವುದಿಲ್ಲ. ಒಂದು ವಾರದ ನಂತರ ನಾನು ಹೋಗಿ ನೋಡಲಾಗಿ ಪ್ರತಿವಾದಿ 1 ರಿಂದ 3 ರವರು ಅಕ್ರಮವಾಗಿ ಸೇರಿಕೊಂಡಿರುವುದು ಕಂಡು ಬಂದಿರುತ್ತದೆ, ಆ ಕಾರಣ ನಾನು ದಾವೆ ಹೂಡಿರುತ್ತೇನೆ. ಅಕ್ರಮವಾಗಿ ಸ್ವಾಧಿನ ಪಡೆದುಕೊಂಡಿರುವ ಬಗ್ಗೆ ನಾನು ಪೋಲಿಸರಿಗೆ ದೂರು ನೀಡಿರುವುದಿಲ್ಲ. ಕ್ರಯವಾದ ನಂತರ ನಾನು ಖಾತೆ ವರ್ಗಾವಣೆ ಮಾಡಿಸಿಕೊಳ್ಳಲು ಪಟ್ಟಣ ಪಂಚಾಯಿತಿಗೆ ಅರ್ಜಿ ನೀಡಿರುತ್ತೇನೆ. ಆ ಸಮಯದಲ್ಲಿ ಖಾತೆ 1 ನೇ ಪ್ರತಿವಾದಿಯ ಗಂಡನ ಹೆಸರಿನಲ್ಲಿತ್ತು.

ಮುಂದುವರೆದ ಪಾಟೀ ಸವಾಲಿಗೆ ಸಮಯ ಸಮಯ ಕೋರಿದ್ದು, ಮುಂದೂಡಲಾಯಿತು

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸಾ.ಸ.ಇ.ಒ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ
ಹೆಚ್.ಡಿ.ಕೋಟೆ.